ಅಸಲು ದಾವಾ ನಂ. 251 /2022
ಪಿ ಡಬ್ಲ್ಯು 1

- -

ದಿನಾಂಕಃ 07-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ-</u> **ಪ್ರತಿವಾದಿ ನಂ.1 ಪರ ಶ್ರೀ N.S.H ವಕೀಲರಿಂದ**

ವಾದಿ ಬಸವರಾಜ ನನ್ನ ತಂದೆ ಇರುತ್ತಾರೆ. ಅವರು ಹೊಲದಲ್ಲಿ ಕೆಲಸ ಮಾಡುತ್ತಾರೆ ಮತ್ತು ಆರೋಗ್ಯವಂತ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯದ ಮುಂದೆ ಹಾಜರಾಗಲು ಸಶಕ್ತರಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಅಕ್ಕಸಾಲಿಗ ಇದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳು ಇದ್ದರು ಅವರಿಗೆ ಹೆಣ್ಣು ಸಂತತಿ ಇರಲಿಲ್ಲ. ನನ್ನ ದೊಡ್ಡಪ್ಪ ಚಂದ್ರಶೇಖರ 2000 ನೇ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ. ಅವರು ಸರ್ಕಾರಿ ನೌಕರಿ ಮಾಡುತ್ತಿದ್ದರು. ನಮಗೆ ನಮ್ಮ ಮತನೆತನದ ಮೂಲ ಜಮೀನು ಸರ್ವೇ ನಂ.76/3 ಎಂದರೆ ಸರಿ. ಈ ಜಮೀನು ಹೊರತು ಪಡಿಸಿ ನಮಗೆ 180 ಚದರ ಅಡಿಯ ಒಂದು ಮನೆ ಆಸ್ತಿ ಇರುತ್ತದೆ. ನನ್ನ ದೊಡ್ಡಪ್ಪ ತೀರಿಕೊಂಡ ನಂತರ ನಮ್ಮಲ್ಲಿ ವಾಟ್ನಿ ಪತ್ರ ಆಗಿಲ್ಲ. ನನ್ನ ದೊಡ್ಡಮ್ಮ ವಿಮಲಾಬಾಯಿ ಜಮಖಂಡಿಯಲ್ಲಿ ತೀರಿಕೊಂಡಿರುತ್ತಾರೆ. ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ನನ್ನ ದೊಡ್ಡಪ್ಪನಿಗೆ ಪ್ರತಿವಾದಿ ನಂ.1 ರಿಂದ 5 ಮಕ್ಕಳು ಎಂದರೆ ಸರಿ. ಚಂದ್ರಶೇಖರ ಇವರು ನೌಕರಿ ಮಾಡುತ್ತಿರುವಾಗ ಸರ್ವೆ ನಂ.285/4 ಜಮೀನನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ಸರಿ. ಸದರಿ ಜಮೀನನ್ನು ಅವರು ತಮ್ಮ ಸ್ವಂತ ದುಡಿಮೆಯ ಹಣದಿಂದ ಖರೀದಿ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ನಾವು ಒಟ್ಟಾಗಿ ಇರುವಾಗ ಬಂದ ಆದಾಯದಿಂದ ಖರೀದಿ ಹಿಡಿದಿರುವದಾಗಿ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಕಾರಕೂನಕಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಒಕ್ಕಲುತನ ಮಾಡುವಾಗ ಸರ್ವೆ ನಂ.285/4 ರ ಜಮೀನು ಇರಲಿಲ್ಲ ಎಂದರೆ ಸರಿ. ನನ್ನ ದೊಡ್ಡಮ್ಮ ಜಮಖಂಡಿಯಲ್ಲಿ ನನ್ನ ದೊಡ್ಡಪ್ಪ ತೀರಿಕೊಂಡ ನಂತರ 2 ತಿಂಗಳು ಅಲ್ಲಿ ವಾಸ ಇದ್ದರು. ಪ್ರತಿವಾದಿ ನಂ.1 ರಿಂದ 5 ಇವರ ವಿರುದ್ದ ನಾನು ಈ ಖೊಟ್ಟಿ ಪಾಲು ವಿಭಾಗ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂ.285/4 ಕ್ಷೇತ್ರ 1 ಎಕರೆ 39 ಗುಂಟೆ ಜಮೀನನ್ನು ಪ್ರತಿವಾದಿಯರ ತಂದೆ ತಮ್ಮ ಸ್ವಂತ ಗಳಿಕೆಯಿಂದ ಖರೀದಿ ಹಿಡಿದಿದ್ದರು ನಾವು ಸಹ ಹಣ ನೀಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳನ್ನು 7 ಸಾವಿರ ರೂಪಯಿ ಬಾಡಿಗೆ ಆಧಾರದ ಮೇಲಿಂದ ಸಾಗುವಳಿ

ಮಾಡಲು ನೀಡಿರುತ್ತೇವೆ. ಹಾಗೆ 2 ಎಕರೆ 30 ಗುಂಟೆ ಜಮೀನನ್ನು ನಾವು ಸಾಗುವಳಿ ಮಾಡುತ್ತಿದ್ದು ಉಳಿದ 2 ಎಕರೆ 30 ಗುಂಟೆ ಜಮೀನನ್ನು ಬಾಡಿಗೆಯ ಮೇಲೆ ಕೊಟ್ಟಿರುತ್ತೇವೆ. ನಮ್ಮ ಜಮೀನಿನಲ್ಲಿ ಈಗ ಗೋವಿನ ಜೋಳ ಬೆಳೆದಿರುತ್ತೇವೆ. ಹಾಗೆ ಜಮೀನಿನಲ್ಲಿ ಬೆಳೆದ ಬೆಳೆಯ ಆದಾಯವನ್ನು ಪ್ರತಿವಾದಿ ನಂ.1 ರಿಂದ 5 ಇವರಿಗೆ ಕೊಟ್ಟಿರುತ್ತೇವೆ.  ಮನೆಯಲ್ಲಿಯೂ ಸಹ 1 ನೆ ಪ್ರತಿವಾದಿಗೆ ಹಕ್ಕು ಇರುತ್ತದೆ ಎಂದರೆ ಸರಿ. ಪ್ರತಿವಾದಿ ನಂ.1 ರಿಂದ 5 ಇವರು ಮನೆಯಲ್ಲಿ ಪಾಲು ಬೆಡಿದ್ದರು ನಾವು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಈ ವಿಷಯ ಗೊತ್ತಿದ್ದು ಅವರು ಸಾಕ್ಷ್ಯ ನುಡಿದಲ್ಲಿ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಬೇಕು ಅಂತಲೇ ನನ್ನ ಹೆಸರಿಗೆ ಒಟ್ಟು ಮೊಕ್ತಿಯಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಎಕರೆಗೆ ಸರಾಸರಿ 25 ರಿಂದ 30 ಸಾವಿರ ಲಾವಣಿ ಹಣ ಬರುತ್ತದೆ ಎಂದರೆ ಸರಿಯಲ್ಲ ಅದೇ ರೀತಿ ಎಕರೆಗೆ ಪ್ರತಿ ವರ್ಷ 5 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ  ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).